# ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗುಂಬ ರಸ್ತೆ, ತುಮಕೂರು – 572 103, ದೂರವಾಣಿ ಸಂಖ್ಯೆ 0816–2272280

email : tudatmk2009@yahoo.co.in, website : tuda.co.in.

ಕ್ರಮಾಂಕ ಟಿಯುಡಿಎ/ಸಿಎಎಸ್ಎ/01/2012–13 **ಪ್ರಕಟಣೆ** ದಿನಾಂಕ : 27–11–2012

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರವು ಈ ಕೆಳಕಂಡ ನಾಗರೀಕ ಸೌಕರ್ಯ ನಿವೇಶನಗಳನ್ನು ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ ಎಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸಲಾಗಿದೆ. ಆಸಕ್ತ ಸಂಘ ಸಂಸ್ಥೆಗಳವರು ನಿಬಂಧನೆಗಳಿಗನುಸಾರವಾಗಿ ಅರ್ಜಿ ಸಲ್ಲಿಸಿಕೊಳ್ಳಬಹುದಾಗಿರುತ್ತದೆ.

| ಕ್ರ ಸಂ. | ಗ್ರಾಮದ ಹೆಸರು | ಸರ್ವೆ ನಂಬರ್ | ಅಳತೆ ಮೀಟರ್‌ಗಳಲ್ಲಿ (ಅಂದಾಜು) | ವಿಸ್ತೀರ್ಣ ಚದುರ ಮೀಟರ್‌ಗಳಲ್ಲಿ | ಗುತ್ತಿಗೆಯ ಒಟ್ಟು ಮೊತ್ತ (30 ವರ್ಷಗಳಲ್ಲಿ) | ಅರ್ಜಿ ಯೊಂದಿಗೆ ಸಲ್ಲಿಸಬೇಕಾದ | ವಾರ್ಷಿಕ ಗುತ್ತಿಗೆ ಮೊತ್ತ | ನೊಂದಣಿ ಶುಲ್ಕ ರೂ. |
|---|---|---|---|---|---|---|---|---|
| 1 | ಸತ್ಯಮಂಗಲ | 220/2,3,4, 230/1,2,3,4,5 | 21.42X24.10 | 516.20 | 1666300 | 166630 | 206788 | 1000 |
| 2 | ಭೀಮಸಂದ್ರ | 18/5 | 13.30X16.44 & 7.36X12.30 | 310.00 | 1000680 | 100068 | 124184 | 1000 |
| 3 | ಮರಳೂರು | 17 | 72.50X24.00X1/2 | 870.00 | 3510450 | 351045 | 435647 | 1000 |
| 4 | ಮರಳೂರು | 23/5 | 21.86+16.27/2X30.69+21.71/2 | 499.50 | 2015500 | 201550 | 250124 | 1000 |
| 5 | ಮರಳೇನಹಳ್ಳಿ | 34/5 | 31.09+28.96X215.24 | 457.58 | 1231250 | 123125 | 152798 | 1000 |
| 6 | ವಕ್ಕೋಡಿ | 85/7 | 22.9 +21.5/2 X 14 | 310.08 | 500170 | 50017 | 62071 | 1000 |
| 7 | ಮೆಳೇಕೋಟೆ | 8/1 | 12.19+21.0/2X43.8+44. 55/2=570.92 | 570.92 | 2150050 | 215005 | 266821 | 1000 |
| 8 | ಅಂತರಸನಹಳ್ಳಿ | 38/1B | 13.41+15.24/2X18.29 | 262.00 | 705000 | 70500 | 87491 | 1000 |
| 9 | ಅರಕೆರೆ | 96/1, 2 | 25.52+23.76/2 X 71.30+72.20/2 | 1767.92 | 3329000 | 332900 | 413129 | 2000 |
| 10 | ರಂಗಾಪುರ | 12/2A1 | 9.6+8.4/2 X 15.6 | 140.40 | 339910 | 33991 | 42183 | 1000 |
| 11 | ಹೊನ್ನೇನಹಳ್ಳಿ | 4/9 | 36.58+63/2X15.24 | 758.80 | 1837060 | 183706 | 227979 | 1000 |
| 12 | ಕ್ಯಾತ್ಸಂದ್ರ | 68/6, 69/3 | 17.00+19.8/2 X 21.64 | 398.17 | 1820860 | 182086 | 225969 | 1000 |
| 13 | ಗೆದ್ದಲಹಳ್ಳಿ | 30/4,5 | 35.36X35.36 | 1250.32 | 8744740 | 874474 | 1085222 | 2000 |
| 14 | ತುಮಕೂರು ಕಸಬಾ | 8 | 20.80X45.50 | 946.40 | 8146610 | 814661 | 1010994 | 1000 |
| 15 | ತುಮಕೂರು ಕಸಬಾ | 183/4A, 183/1B | 90 X 35 | 292.67 | 1180955 | 118096 | 146557 | 1000 |
| 16 | ತುಮಕೂರು ಅಮಾನಿಕೆರೆ | 289/2 | 21.92+19.68/2X19.00 | 395.00 | 2125100 | 212510 | 263725 | 1000 |
| 17 | ತಿಮ್ಲಾಪುರ | 12 | 37.5 X 26.92 | 1009.50 | 488800 | 48880 | 60660 | 2000 |

**ಕಾಯ್ದಿರಿಸಿದ ಉದ್ದೇಶ :** ಮಾರುಕಟ್ಟೆ, ಅಂಚೆ ಕಛೇರಿ, ಬ್ಯಾಂಕ್, ಬಸ್‌ಸ್ಟಾಂಡ್, ಬಸ್ ಡಿಪೋ, ನ್ಯಾಯಬೆಲೆ ಅಂಗಡಿ, ಹಾಲಿನ ಕೇಂದ್ರ, ಶಾಲೆ, ಚಿಕಿತ್ಸಾಲಯ, ಹೆರಿಗೆ ಆಸ್ಪತ್ರೆ, ಶಿಶುಪಾಲನಾ ಕೇಂದ್ರ, ಗ್ರಂಥಾಲಯ, ವ್ಯಾಯಾಮ ಶಾಲೆ, ಮನರಂಜನಾ ಕೇಂದ್ರ, ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆ ಕೇಂದ್ರ, ಮನೋಭಾವದ ಸೇವೆಗಳಿಗಾಗಿ ಒಂದು ಕೇಂದ್ರ, ಪೋಲೀಸ್ ಠಾಣೆ, ಪ್ರಾದೇಶಿಕ ಕಛೇರಿ, ಸ್ಥಳೀಯ ಪ್ರಾಧಿಕಾರ, ಕ.ನ.ನೀ.ಸ. ಮತ್ತು ಒ.ಚ.ಮಂಡಳಿ, ಕ.ವಿ.ಮಂಡಳಿ, ಸರ್ವೀಸ್ ಸ್ಟೇಷನ್ ಇತರೆ

**ಖಾಲಿ ಅರ್ಜಿಗಳನ್ನು ದಿನಾಂಕ 27–11–2012 ರಿಂದ ನೀಡಲಾಗುವುದು. ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸುವ ಕಡೆ ದಿನಾಂಕ 27–12–2012**

1. **ಹಂಚಿಕೆ :** ಸಿ.ಎ.ನಿವೇಶನಗಳ ಹಂಚಿಕೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ 1987 ಮತ್ತು ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ ನಿಯಮಗಳು 1991ರ ರೀತ್ಯಾ ಹಂಚಲಾಗುವುದು.
2. **ನೋಂದಣಿ :**
   - ಎ) ಅರ್ಜಿಗಳನ್ನು ಸಲ್ಲಿಸುವುದಕ್ಕೆ ಮುಂಚೆ ಪ್ರಾಧಿಕಾರದಲ್ಲಿ ನೋಂದಣಿ ಮಾಡಿಸಿ, ನೋಂದಣಿ ಶುಲ್ಕ ಪಾವತಿಸಿ ಪ್ರಾರಂಭಿಕ ಠೇವಣಿಯೊಂದಿಗೆ ನಿಗಧಿತ ಪ್ರಪತ್ರ 2 ರಲ್ಲಿ ಅರ್ಜಿ ಸಲ್ಲಿಸಬೇಕು.
   - ಬಿ) ಈ ಹಿಂದೆ ನಾಗರೀಕ ಸೌಕರ್ಯ ನಿವೇಶನ ಕೋರಿ ನೋಂದಾಯಿಸಿ ಅರ್ಜಿಗಳನ್ನು ಹಾಕಿಕೊಂಡಿದ್ದವರು ಈ ಪ್ರಕಟಣೆಯನ್ವಯ ಹೊಸದಾಗಿ ನೋಂದಣಿ ಮಾಡಿಸಿ ಅರ್ಜಿ ಹಾಕಿಕೊಳ್ಳತಕ್ಕದ್ದು. ಈ ಹಿಂದೆ ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
   - ಸಿ) ಯಾವುದೇ ಸಂಸ್ಥೆಯು ಒಂದಕ್ಕಿಂತ ಹೆಚ್ಚು ಸಿ.ಎ.ನಿವೇಶನಗಳಿಗೆ ಅರ್ಜಿ ಸಲ್ಲಿಸಲು ಅಪೇಕ್ಷಿಸಿದಲ್ಲಿ ಆ ಸಂಸ್ಥೆಯು ಪ್ರತಿಯೊಂದು ನಿವೇಶನಕ್ಕೂ ಪ್ರತ್ಯೇಕವಾಗಿ ನೋಂದಾಯಿಸಬೇಕು ಹಾಗೂ ಪ್ರತ್ಯೇಕವಾಗಿ ಪ್ರಾರಂಭಿಕ ಠೇವಣಿಯೊಂದಿಗೆ ಅರ್ಜಿ ಸಲ್ಲಿಸಬೇಕು.
   - ಡಿ) ನೋಂದಣಿ ಶುಲ್ಕವನ್ನು ಯಾವುದೇ ಸಂಸ್ಥೆಯು ಹಿಂತೆಗೆದುಕೊಳ್ಳಲು ಬಯಸಿದಲ್ಲಿ ನೋಂದಣಿ ಶುಲ್ಕದಿಂದ ಶೇಕಡ 10 ರಷ್ಟು ಮೊಬಲಗನ್ನು ಸೇವಾ ಶುಲ್ಕವಾಗಿ ಕಳೆದು ನಂತರ ಉಳಿದ ಮೊಬಲಗನ್ನು ಹಿಂತಿರುಗಿಸಲಾಗುವುದು.
   - ಇ) ಸಂಸ್ಥೆಗೆ ಸಿ.ಎ.ನಿವೇಶನ ಹಂಚಿಕೆಯಾದಲ್ಲಿ ನೋಂದಣಿ ಶುಲ್ಕವನ್ನು ಹಿಂತಿರುಗಿಸಲಾಗುವುದಿಲ್ಲ ಹಾಗೂ ಯಾವುದೇ ಗುತ್ತಿಗೆ ಮೊಬಲಗಿಗೆ ಸರಿಹೊಂದಿಸಲಾಗುವುದಿಲ್ಲ.
3. **ಅರ್ಹತೆ :**
   - ಎ) ನಿಯಮಗಳಿಗೆ ಒಳಪಟ್ಟು ನೊಂದಾಯಿಸಿಕೊಂಡಿರುವ ಸಂಸ್ಥೆಯೊಂದಕ್ಕೆ ಸಿ.ಎ.ನಿವೇಶನವನ್ನು ಗುತ್ತಿಗೆ ಆಧಾರದ ಮೇಲೆ ಮಾತ್ರ ಪ್ರಾಧಿಕಾರದಿಂದ ಹಂಚಲಾಗುವುದು.
   - ಬಿ) ಸಂಸ್ಥೆ ಎಂದರೆ 1960 ರ ಕರ್ನಾಟಕ ಸಂಘ ಸಂಸ್ಥೆಗಳ ನೋಂದಣಿ ಕಾಯ್ದೆ ಅಡಿಯಲ್ಲಿ ನೋಂದಾಯಿಸಿಕೊಂಡಿರುವ ಸಂಸ್ಥೆ, ಸಂಘ ಅಥವಾ ಒಂದು ಸಂಘ ಸಂಸ್ಥೆ ಅಥವಾ 1959 ರ ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮದ ಮೇರೆಗೆ ನೊಂದಾಯಿತವಾದ ಸಹಕಾರಿ ಸಂಘ ಅಥವಾ ಯಾವುದೇ ಧರ್ಮದಾಯದ ಶೈಕ್ಷಣಿಕ ಅಥವಾ ಧಾರ್ಮಿಕ ಉದ್ದೇಶಕ್ಕಾಗಿ ಪೂರ್ಣವಾಗಿ ಸೃಜಿಸಲಾದ ಒಂದು ನ್ಯಾಸ.
4. **ಸಂಸ್ಥೆಗೆ ನಿವೇಶನ ಹಂಚಿಕೆ ಮತ್ತು ಗುತ್ತಿಗೆ ಮೊಬಲಗು.**
   - ಎ) ನಾಗರೀಕ ಸೌಕರ್ಯ ನಿವೇಶನವನ್ನು ಗರಿಷ್ಠ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಹಂಚಲಾಗುವುದು ಹಾಗೂ ಸದರಿ ಹಂಚಿಕೆಯಿಂದ ಮಾಲೀಕತ್ವ ಹೊಂದಲು ಅರ್ಹತೆಗೆ ಅವಕಾಶವಿರುವುದಿಲ್ಲ.
   - ಬಿ) ಗುತ್ತಿಗೆ ಹಣವನ್ನು ಇಡಿಗಂಟಾಗಿ ಅಥವಾ ಗುತ್ತಿಗೆ ಅವಧಿಯಲ್ಲಿ ವಾರ್ಷಿಕ ಕಂತಿನ ಮೇಲೆ ಪಾವತಿಸಬಹುದಾಗಿದೆ.
   - ಸಿ) ನಿವೇಶನದ ಗುತ್ತಿಗೆ ಹಣವನ್ನು ಬದಲಾಯಿಸುವ ಅಧಿಕಾರ ಪ್ರಾಧಿಕಾರಕ್ಕೆ ಒಳಪಟ್ಟಿರುತ್ತದೆ.
   - ಡಿ) ನಗರಾಭಿವೃದ್ಧಿ ಪ್ರಾಧಿಕಾರ ನಿಗಧಿಪಡಿಸುವ ಇತರೆ ಶುಲ್ಕಗಳು ಪಾವತಿಸತಕ್ಕದ್ದು
5. **ಅರ್ಜಿ :**
   - ಎ) ನಿಗಧಿತ ದಿನಾಂಕ ಮತ್ತು ವೇಳೆ ನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
   - ಬಿ) ಸಿ.ಎ.ನಿವೇಶನ ಕೋರಿ ಅರ್ಜಿ ಸಲ್ಲಿಸುವ ಅರ್ಜಿದಾರರು ಅರ್ಜಿ ಸಲ್ಲಿಸುವ ಮುನ್ನ ನಿವೇಶನ ನೋಡಿರತಕ್ಕದ್ದು.
   - ಸಿ) ಅರ್ಜಿದಾರನು ವಾರ್ಷಿಕ ವರದಿ ಮತ್ತು ಕಳೆದ 5 ವರ್ಷಗಳ ಲೆಕ್ಕ ಪರಿಶೋಧನೆಯಾದ ವರದಿ, ನಿವೇಶನ ಹಂಚಿಕೆಯ ಬೇಡಿಕೆಯ ಬಗ್ಗೆ ನಿರ್ಣಯಗಳು ಇತ್ಯಾದಿಗಳನ್ನು ಅರ್ಜಿಯ ಜೊತೆಗೆ ಸಲ್ಲಿಸಬೇಕು.
6. **ಹಂಚಿಕೆ ನಿಂಬಂಧನೆಗಳು :**
   - ಎ) ಹೆಚ್ಚಿನ ವಿವರಗಳಿಗೆ ಹಾಗೂ ಷರತ್ತುಗಳ ಬಗ್ಗೆ ಮಾಹಿತಿಯನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.
   - ಬಿ) ಈ ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ ವಿಷಯದಲ್ಲಿ ಪ್ರಾಧಿಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ.
   - ಸಿ) ನಿವೇಶನ ಅಳತೆ ಮತ್ತು ಗುತ್ತಿಗೆ ಮೊಬಲಗು ತಾತ್ಕಾಲಿಕವಾಗಿರುತ್ತದೆ, ನಿವೇಶನಗಳ ಉದ್ದೇಶ ಆಂತರಿಕ ಬದಲಾವಣೆಗೊಳಪಟ್ಟಿರುತ್ತದೆ.

ಸಹಿ/–
(ಎಸ್.ಆರ್.ಶ್ರೀಧರಮೂರ್ತಿ)
ಅಧ್ಯಕ್ಷರು,
ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು.

ಸಹಿ/–
(ಎನ್.ಆರ್.ಆದರ್ಶಕುಮಾರ್) ಕೆ.ಸಿ.ಎ.ಎಸ್.,
ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು.